**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 176/2018 ಸಿ.ಡಬ್ಲ್ಯೂ –4 ಪಿ.ಡಬ್ಲ್ಯೂ -4

| | | |
|---|---|---|
| ಹೆಸರು | ಃ | ಮಸೂರನ್ ಬೇಗಂ |
| ತಂದೆಃ ಗಂಡ | ಃ | ಬರಖತ ಅನ್ಸಾರಿ |
| ವಯಸ್ಸು | ಃ | ೫೦ ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | ಃ | ಆಳಂದ |

ದಿನಾಂಕಃ೧೬.೦೯.೨೦೨೧

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ೧ನೇ ಆರೋಪಿಯೊಂದಿಗೆ ನನ್ನ ಮಗಳ ಮದುವೆ ಮಾಡಿ ಕೊಟ್ಟಿದ್ದೇವೆ. ೮ ತಿಂಗಳ ವರೆಗೆ ಅವರುಗಳು ಚೆನ್ನಾಗಿ ಇದ್ದರು. ನಂತರ ಆರೋಪಿಗಳು ಅವಳಿಗೆ ಕಿರುಕುಳ ಕೊಡಲು ಪ್ರಾರಂಭಿಸಿದ್ದರು, ಅವಳನ್ನು ಇಟ್ಟುಕೊಳ್ಳಲು ರಾಜಿ ಇರಲಿಲ್ಲ. ಆರೋಪಿಗಳೆಲ್ಲರೂ ನಮ್ಮ ಜೊತೆಗೆ ಇರಬೇಡ ತವರು ಮನೆಯಲ್ಲಿ ಇರು ಎಂದು ಹೇಳಿರುತ್ತಾರೆ. ಹಲ್ಲಿನ ತೊಂದರೆಯಿಂದಾಗಿ ತನ್ನ ಗಂಡನಿಗೆ ಆಕೆ ಫೋನ್ ಮಾಡಿ ಹೇಳಿದಳು. ಅವರುಗಳು ಅದು ನಿನ್ನ ನಾಟಕ ಎಂದು ಹೇಳಿದರು. ನಾನು ೧ನೇ ಆರೋಪಿಗೆ ಫೋನ ಮಾಡಿ ಹೇಳಿದೆ, ಬಂದು ನಿನ್ನ ಹೆಂಡತಿಗೆ ಆಸ್ಪತ್ರೆಗೆ ತೋರಿಸು ಎಂದು. ಆಗ ನನ್ನ ಮಗಳು ವಾಪಸ್ಸು ಊರಿಗೆ ಬಂದು ಆತನನ್ನು ನಾನು ಇಲ್ಲಿ ಚಿಕಿತ್ಸೆ ಪಡೆಯಲೇ, ಅಥವಾ ಮುಂಬೈಯಲ್ಲಿ ಚಿಕಿತ್ಸೆ ಪಡೆಯಲೇ ಎಂದು ಕೇಳಿದಳು. ನಾನು ನನ್ನ ಮಗಳನ್ನು ಮುಂಬೈಗೆ ಚಿಕಿತ್ಸೆಗೆ ಕರೆದುಕೊಂಡು ಹೋದೆ. ೧ನೇ ಆರೋಪಿ ನನ್ನ ಮಗಳಿಗೆ ಏನಾಯಿತು ಎಂದು ಸಹ ಕೇಳಲಿಲ್ಲ. ಅವರು ತನ್ನೊಂದಿಗೆ ಅವಳನ್ನು ಇಟ್ಟುಕೊಳ್ಳಲು ಒಪ್ಪುತ್ತಿಲ್ಲ. ನನ್ನ ಮಗಳಿಗೆ ಸುಳ್ಳು ಸುಳ್ಳು ಆಪಾದನೆ ಮಾಡುತ್ತಿದ್ದಾರೆ, ಆರೋಪಿಗಳನ್ನು ಆಕೆಯನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಹೇಳಿರುತ್ತಾರೆ. ನನ್ನೊಂದಿಗೆ ನೀವು ಯಾವತ್ತು ಬರುವುದಿಲ್ಲ ಎಂದು ಹೇಳುತ್ತಿರುತ್ತಾರೆ. ಪಂಚಾಯತಿಯ ಮಾತು ಸಹ ಕೇಳಲಿಲ್ಲ. ಮನೆಯಲ್ಲಿ ಕೆಲಸ ಮಾಡುವುದಿಲ್ಲ, ಈಕೆಯ ಕಾರಣದಿಂದಾಗ ನಮ್ಮ ಮನೆಯ ವಾತಾವರಣ ಕೆಟ್ಟಿದೆ ಎಂದು ಹೇಳುತ್ತಾರೆ.

**ಪಾ. ಸವಾಲು ಆರೋಪಿ ಪರ ಶ್ರೀ ಬಿ.ಜಿ.ಬಿ ವಕೀಲರಿಂದಃ**

[ ಆರೋಪಿ ಪರ ವಕೀಲರು ಎಲ್ಲಾ ಸಾಕ್ಷಿಗಳನ್ನು ಒಟ್ಟಾಗಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿದ ಮೇರೆಗೆ ಅನುಮತಿಸಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 176/2018 ಸಿ.ಡಬ್ಲ್ಯೂ –5 ಪಿ.ಡಬ್ಲ್ಯೂ -4

| | | |
|---|---|---|
| ಹೆಸರು | ಃ | ಹಸನತ ಅನ್ಸಾರಿ |
| ತಂದೆಃ ಗಂಡ | ಃ | ಬರಖತ್ ಅನ್ಸಾರಿ |
| ವಯಸ್ಸು | ಃ | ೩೧ ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | ಃ | ಆಳಂದ |

ದಿನಾಂಕಃ೧೬.೦೯.೨೦೨೧

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಆರೋಪಿಗಳು ನನ್ನ ಸಹೋದರಿಗೆ ತುಂಬಾ ಕಿರುಕುಳ ಕೊಟ್ಟಿದ್ದಾರೆ. ಅವಾಚ್ಯ ಶಬ್ದಗಳಿಂದ ಬಯ್ಯುತ್ತಿದ್ದರು. ಅವಳು ಅವರೊಂದಿಗೆ ಇರಲಾಗಲಿಲ್ಲ, ಅವಳ ಹಲ್ಲಿಗೆ ನೋವು ಉಂಟಾಗಿತ್ತು.

**ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀ ಬಿ.ಎ.ಡಿ. ವಕೀಲರಿಂದ**

ಪಂಚನಾಮೆಯನ್ನು ಠಾಣೆಯಲ್ಲಿ ಜರುಗಿಸಲಾಗಿದೆ. ಸದರಿ ಪಂಚನಾಮೆಯನ್ನು ಕನ್ನಡದಲ್ಲಿ ಬರೆಯಲಾಗಿದೆ. ನನ್ನ ಸಮಕ್ಷಮ ಬೇರೆ ಯಾರೂ ಸಹಿ ಹಾಕಿರಲಿಲ್ಲ. ನಾನು ಪಂಚನಾಮೆಗೆ ಸಹಿ ಮಾಡಿರುವುದಿಲ್ಲ, ಹೇಳಿಕೆಗೆ ಸಹಿ ಮಾಡಿರುತ್ತೇನೆ. ನಾನು ನನ್ನ ಹೇಳಿಕೆಯನ್ನು ಬರವಣಿಗೆಯಲ್ಲಿ ಕೊಟ್ಟಿದ್ದೇನೆ, ಅದನ್ನು ಠಾಣೆಯ ಠಾಣಾ ಬರಹಗಾರ ಕಂಪೂಟರಿಕೃತಗೊಳಿಸಿ ನನ್ನ ಸಹಿ ಪಡೆದಿದ್ದಾನೆ. ಘಟನೆ ದಿನಾಂಕ: 11.10.2010 ರಂದು ಆಗಿದೆ, ಆದರೆ ನಾನು ಹೇಳಿಕೆಯನ್ನು ದಿನಾಂಕ: 12.10.2010 ರಂದು ನೀಡಿರುತ್ತೇನೆ.

ನನಗೆ ಹೇಳಿಕೆ ಕೊಡಲು ಚಾಸಾ-1 ರವರು ಕರೆದಿದ್ದರು. ಆನಂತರ ನಾನು ಠಾಣೆಗೆ ಹೋಗಿರುವುದಿಲ್ಲ. ನನ್ನನ್ನು ಠಾಣೆಗೆ ಬರುವಂತೆ ಪೋಲಿಸರು ಯಾವುದೇ ನೋಟಿಸು ನೀಡಿಲ್ಲ. ಇಬ್ಬರು ತಪ್ಪಿಸಿಕೊಂಡು ಹೋದ ವ್ಯಕ್ತಿಗಳ ಹೆಸರು ಮತ್ತು ವಿಳಾಸ ನನಗೆ ಗೊತ್ತಿಲ್ಲ. ನಾನು ಪೋಲಿಸರಿಂದ ಮುಂದೆ ನೀಡಿರುವ ಹೇಳಿಕೆಯಲ್ಲಿ ಆರೋಪಿಗಳ ಹೆಸರು ಹೇಳಿ ಬರೆಸಿದ್ದೇನೆ. ಮೊದಲು ಸಿಕ್ಕ ಯಲ್ಲಪ್ಪ ಎಂಬ ಆರೋಪಿಯ ಹೇಳಿಕೆಯ ಮೇರೆಗೆ ನಾನು ಇತರ ಆರೋಪಿಗಳ ಹೆಸರು ಹೇಳಿ ಬರೆಸಿದ್ದೇನೆ. ನಾವು ವಶಪಡಿಸಿಕೊಂಡ ಮೊಬೈಲ ಯಾವ ಕಂಪನಿಯದ್ದು ಎಂದು ಹೇಳಲು ಬರುವುದಿಲ್ಲ. ಚಾಸಾ-1 ಆಗ ಆಳಂದದಲ್ಲಿ ತಹಸೀಲ್ದಾರರಾಗಿದ್ದರು ಎಂಧರೆ

ಸರಿ. ಅವರ ಅಧೀನದಲ್ಲಿ ನಾನು ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಆ ಕಾರಣಕ್ಕಾಗಿ ಚಾಸಾ-1 ರವರು ನನಗೆ ಏನು ಹೇಳಿದ್ದರು ಅದೇ ರೀತಿ ನಾನು ಬರೆದುಕೊಟ್ಟಿದ್ದೇನೆ ಎಂಥರೆ ಸರಿ ಅಲ್ಲ. ನಾನು ಠಾಣೆಗೆ ಹೋಗಿಲ್ಲ, ಯಾವುದೇ ಹೇಳಿಕೆ ಕೊಟ್ಟಿಲ್ಲ, ಯಾವುದೇ ಗಣಕೀಕೃತಗೊಂಡ ಹೇಳಿಕೆಯ ಮೇಲೆ ನಾನು ಸಹಿ ಮಾಡಿಲ್ಲ ಎಂದರೆ ಸರಿ ಅಲ್ಲ.

ಕೆಲವು ನಕಲಿ ಕಾಗದ ಪತ್ರಗಳು, ಆದೇಶ ಪ್ರತಿ, ಮತ್ತು ಮೊಬೈಲನ್ನು ನಾವು ಜಪ್ತಿಪಡಿಸಿಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾವು ಸದರಿ ಕಂಪೂಟರ್ ಅಂಗಡಿಗೆ ಹೋದಾಗ ಅಲ್ಲಿ ಮೂರು ವ್ಯಕ್ತಿಗಳು ಇದ್ದರು ಅವರಲ್ಲಿ ಇಬ್ಬರು ತಪ್ಪಿಸಿಕೊಂಡರು, ಒಬ್ಬರನ್ನು ವಶಪಡಿಸಿಕೊಂಡೆವು ಎಂದು ನನ್ನ ಹೇಳಿಕೆಯಲ್ಲಿ ನಾನು ಹೇಳಿ ಬರೆಸಿಲ್ಲ ಎಂಥರೆ ಸರಿ ಅಲ್ಲ. ನಕಲಿ ದಾಖಲಾತಿಗಳನ್ನು ಮತ್ತು ಮೊಬೈಲನ್ನು ನಾವು ಜಪ್ತಿಪಡಿಸಿಕೊಂಡಿದ್ದೇವೆ ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ ಎಂಥರೆ ಸರಿ ಅಲ್ಲ. ಚಾಸಾ-1 ರವರ ಅಧೀನದಲ್ಲಿ ನಾನು ಕೆಲಸ ಮಾಡುತ್ತಿದ್ದರಿಂದ ಅವರ ಅಣತಿಯಂತೆ ಕಟ್ಟು ಕಥೆ ಹೇಳಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲು 1 ಮತ್ತು 3 ನೇ ಆರೋಪಿ ಪರ ಶ್ರೀ ಎಂ.ವಿ.ಇ ವಕೀಲರಿಂದ**

[ ಈ ಹಂತದಲ್ಲಿ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು]

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.